ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ ಅವ್ಯಕ್ತ ಮುರಳಿ 13-02-1999

# *ಶಿವ ಅವತರಣೆ ಮತ್ತು ಉಳಿತಾಯದ ಅವತರಣೆ*

(शिव अवतरण और एकानामी के अवतार)

ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

ಇಂದು ತ್ರಿಮೂರ್ತಿ ಶಿವ ತಂದೆಯು ಅತ್ಯಂತ ಪ್ರೀತಿಯ ಹಾಗೂ ಮಧುರ ಸಾಲಿಗ್ರಾಮ ಮಕ್ಕಳೊಂದಿಗೆ ಮಿಲನ ಮಾಡಲು ಬಂದಿದ್ದಾರೆ. ಇಂದು ಶಿವ ಮತ್ತು ಸಾಲಿಗ್ರಾಮಗಳ ವಿಶೇಷ ದಿನವಾಗಿದೆ. ತಂದೆಗೆ ಮಕ್ಕಳನ್ನು ಮಿಲನ ಮಾಡಿ ಖುಷಿಯಾಗುತ್ತಿದೆ ಏಕೆಂದರೆ ತಂದೆಯು ಮಕ್ಕಳ ಹುಟ್ಟು ಹಬ್ಬವನ್ನು ಆಚರಿಸಲು ಬಂದಿದ್ದಾರೆ ಮತ್ತು ಮಕ್ಕಳು ಹೇಳುತ್ತಾರೆ ನಾವು ತಂದೆಯ ಹುಟ್ಟು ಹಬ್ಬವನ್ನು ಆಚರಿಸಲು ಬಂದಿದ್ದೇವೆ. ತಂದೆಗೂ ಖುಷಿಯಿದೆ ಮತ್ತು ಮಕ್ಕಳಿಗೂ ಖುಷಿಯಿದೆ. ಏಕೆ? ಏಕೆಂದರೆ ಈ ಜನ್ಮದಿನ ಇಡೀ ಕಲ್ಪದಲ್ಲಿ ಅತೀತ ಮತ್ತು ಪ್ರಿಯವಾಗಿದೆ. ಇಡೀ ಕಲ್ಪದಲ್ಲಿ ಇಂತಹ ಜನ್ಮದಿನವನ್ನು ಯಾರೂ ಆಚರಿಸುವುದಿಲ್ಲ. ತಂದೆ ಮತ್ತು ಮಕ್ಕಳದು ಒಟ್ಟಿಗೆ ಒಂದೇ ಸಮಯದಲ್ಲಿ ಹುಟ್ಟುಹಬ್ಬವೆಂಬುದು ಮತ್ಯಾವುದೇ ಸಮಯದಲ್ಲಿ ಯಾರದೂ ಇರುವುದಿಲ್ಲ. ಆದ್ದರಿಂದ ಮೊದಲನೆಯದಾಗಿ ಬಾಪ್‌ದಾದಾರವರು ಮಕ್ಕಳಿಗೆ ಪದಮ-ಪದಮ-ಪದಮಗುಣ ಶುಭಾಷಯಗಳನ್ನು ಕೊಡುತ್ತಿದ್ದಾರೆ. ಮಕ್ಕಳ ಶುಭಾಷಯಗಳಂತೂ ಅಮೃತವೇಳೆಯಿಂದ ಬಹಳ-ಬಹಳ ಹೃದಯದಿಂದ, ಹೃದಯದ ಶುಭಾಷಯಗಳು ಬಾಪ್‌ದಾದಾರವರ ಹತ್ತಿರ ತಲುಪಿ ಬಿಟ್ಟಿದೆ. ಬಾಪ್‌ದಾದಾರವರು ಇಷ್ಟೊಂದು ಮಕ್ಕಳನ್ನು , ಸಾಲಿಗ್ರಾಮಗಳನ್ನು ನೋಡಿ ಇದೇ ಖುಷಿಯ ಹಾಡನ್ನು ಹೃದಯದಲ್ಲಿ ಹಾಡುತ್ತಿದ್ದಾರೆ - ವಾಹ್

ಅಗಲಿ ಮರಳಿ ಸಿಕ್ಕಿರುವ ಮಕ್ಕಳೇ ವಾಹ್! ವಾಹ್ ಮುದ್ದು ಮಕ್ಕಳೇ ವಾಹ್! ವಾಹ್ ಅಲೌಕಿಕ ಜನ್ಮ, ಅಲೌಕಿಕ ಹುಟ್ಟುಹಬ್ಬವನ್ನು ಆಚರಿಸುವಂತಹವರೇ ವಾಹ್! ಅಂದಾಗ ಬಾಪ್‌ದಾದಾರವರು ಪ್ರತಿಯೊಬ್ಬ ಮಕ್ಕಳಿಗಾಗಿ ವಾಹ್-ವಾಹ್ನ ಗೀತೆ ಹಾಡುತ್ತಿದ್ದಾರೆ ಏಕೆಂದರೆ ಇಷ್ಟೊಂದು ವಿಶ್ವದ ಆತ್ಮರಲ್ಲಿ ಎಷ್ಟು ಕಡಿಮೆ ನೀವು ಮಕ್ಕಳ ತರಹ ಪದಮಾಪದಮ್ ಭಾಗ್ಯವಂತರಾಗಿದ್ದಾರೆ ಮತ್ತು ಮುಂದೆಯೂ ಭಾಗ್ಯವಂತರಾಗಿರುತ್ತಾರೆ. ಅರ್ಧಕಲ್ಪಕ್ಕೆ ಅಮರ ಭಾಗ್ಯವಾನ್ ಆಗಿರುತ್ತಾರೆ. ಒಂದು ಜನ್ಮದ ವರದಾನವಲ್ಲ, ಅನೇಕ ಜನ್ಮಗಳಿಗೆ ಅಮರ ವರದಾನಿಯಾಗುತ್ತಾರೆ. ಇಂತಹ ಮಕ್ಕಳಿಗೆ ತಮ್ಮ ಸ್ವಮಾನ ಎಷ್ಟು ಸ್ಮೃತಿಯಲ್ಲಿ ಇರುತ್ತದೆ? ಈ ಅಲೌಕಿಕ ಹುಟ್ಟು ಹಬ್ಬ ಅಥವಾ ಅಲೌಕಿಕ ಜನ್ಮದ ಅವಿನಾಶಿ ವಾರಸತ್ವವನ್ನು ತಂದೆಯು ಜನ್ಮದಿಂದಲೇ ಮಕ್ಕಳಿಗೆ ಕೊಡುತ್ತಾರೆ. ಜನ್ಮದಿಂದಲೇ ಸ್ಮೃತಿಯ ಶ್ರೇಷ್ಠ ತಿಲಕ ಪ್ರತಿಯೊಬ್ಬ ಮಗುವಿಗೆ ತಂದೆಯು ಕೊಟ್ಟು ಬಿಟ್ಟಿದ್ದಾರೆ. ತಿಲಕ ಹಚ್ಚಲಾಗಿದೆಯೇ? ಬ್ರಾಹ್ಮಣ ಜೀವನವಿದೆಯೆಂದರೆ ತಿಲಕವೂ ಅವಿನಾಶಿಯಾಗಿದೆ. ಬ್ರಾಹ್ಮಣರ ಮಸ್ತಕದಲ್ಲಿ ತಿಲಕವು ಶ್ರೇಷ್ಠ ಭಾಗ್ಯದ ಲಕ್ಷಣವಾಗಿದೆ.

ಇಲ್ಲಿರುವ ನೀವೆಲ್ಲರೂ ಮತ್ತು ನಾಲ್ಕಾರು ಕಡೆಯ ಮಕ್ಕಳು ದೂರ ಕುಳಿತ್ತಿದ್ದರೂ ಸಹ ಬಹಳ ಉತ್ಸಾಹಉಲ್ಲಾಸದಿಂದ ಈ ಅತೀತ ಮತ್ತು ಪ್ರಿಯವಾದ ಜನ್ಮದಿನವನ್ನು ಆಚರಿಸುತ್ತಿದ್ದೀರಿ. ಆಚರಿಸುತ್ತಿದ್ದೀರಲ್ಲವೇ? ತಂದೆಯು ನಮ್ಮ ಜನ್ಮದಿನವನ್ನು ಆಚರಿಸುತ್ತಿದ್ದಾರೆ ಮತ್ತು ನಾವು ತಂದೆಯ ಜನ್ಮದಿನವನ್ನು ಆಚರಿಸುತ್ತಿದ್ದೇವೆಂದು ಎಲ್ಲರಿಗೂ ಖುಷಿಯಾಗುತ್ತಿದೆ. ಎಷ್ಟು ಖುಷಿಯಿದೆ? ಖುಷಿಯನ್ನು ಅಳಿಯಲು ಸಾಧ್ಯವೇ? ಅಳತೆಯಿದೆಯೇ? ಈ ಪ್ರಪಂಚದಲ್ಲಿ, ಈ ಅಲೌಕಿಕ ಖುಷಿಯ ಯಾವುದೇ ಅಳತೆ ಮಾಡುವ ಸಾಧನವನ್ನು ಕಂಡುಹಿಡಿದಿಲ್ಲ. ಒಂದುವೇಳೆ ನಿಮಗೆ ಸಾಗರದಷ್ಟು ಖುಷಿಯಿದೆಯೇ ಎಂದು ಕೇಳಿದರೆ ಏನು ಹೇಳುತ್ತೀರಿ? ಸಾಗರವೂ ಚಿಕ್ಕದೇ ಎಂದು ಹೇಳುತ್ತೀರಿ. ಒಳ್ಳೆಯದು. ಆಕಾಶದಷ್ಟಿದೆಯೇ? ಆಕಾಶಕ್ಕಿಂತಲೂ ಮೇಲೆ ನಿಮ್ಮ ಮನೆ ಮತ್ತು ಸೂಕ್ಷ್ಮವತನವಿದೆ. ಆದ್ದರಿಂದ ಅಳತೆಗಾಗಿ ಯಾವ ಸಾಧನಕ್ಕೂ ಸಾಧ್ಯವಾಗುವುದಿಲ್ಲ, ಸಾಧ್ಯವಿಲ್ಲ ಕೂಡ. ಒಂದು ಕೈಯ ಚಪ್ಪಾಳೆ ತಟ್ಟುವಷ್ಟು ಖುಷಿಯಿದೆಯೇ. (ಎಲ್ಲರೂ ಚಪ್ಪಾಳೆ ತಟ್ಟಿದರು) ಖುಷಿಯಿದೆ - ಇದರಲ್ಲಂತು ಎಲ್ಲರೂ ಕೈ ಎತ್ತಿದ್ದರು. ಶುಭಾಷಯಗಳು. ಈಗ ಎರಡನೇ ಪ್ರಶ್ನೆಯಿದೆ, (ತಿಳಿದುಕೊಂಡಿದ್ದೀರಿ ಅದಕ್ಕೆ ನಗುತ್ತಿದ್ದೀರಿ) ಬಾಪ್‌ದಾದಾರವರು ಪ್ರತಿಯೊಬ್ಬ ಮಗುವನ್ನು ಸದಾ ಅರಳಿರುವ ಆತ್ಮಿಕ ಗುಲಾಬಿಯಂತೆ ನೋಡಲು ಬಯಸುತ್ತಾರೆ. ಅರ್ಧ ಅರಳಿರುವವರಲ್ಲ, ಸದಾ ಮತ್ತು ಪೂರ್ಣವಾಗಿ ಅರಳಿರುವಂತೆ ನೋಡಬೇಕೆಂದುಕೊಳ್ಳುತ್ತಿದ್ದಾರೆ ಅರಳಿರುವ ಪುಷ್ಪವೂ ಎಷ್ಟು ಪ್ರಿಯವೆನಿಸುತ್ತದೆ ನೋಡಲು ಇಷ್ಟವಾಗುತ್ತದೆ ಸ್ವಲ್ಪ ಬಾಡಿ ಹೋದರೂ ಏನು ಮಾಡುತ್ತಾರೆ? ತೊಲಗಿಸಿಬಿಡುತ್ತಾರೆ. ಆದರೆ ಬಾಪ್‌ದಾದಾರವರು ದೂರ ಮಾಡುವುದಿಲ್ಲ, ಅವರೇ ಸ್ವಯಂ ದೂರವಾಗಿಬಿಡುತ್ತಾರೆ.

ಇಂದು ಆಚರಿಸುವ ದಿನವಾಗಿದೆಯಲ್ಲವೇ! ಮುರಳಿಯನ್ನು ಸದಾ ಕೇಳುತ್ತಿರುತ್ತೀರಿ. ಇಂದು ಬಹಳ ಖುಷಿಯಲ್ಲಿ ಮನಸ್ಸಿನಿಂದ ನೃತ್ಯ ಮಾಡಿರಿ ಮತ್ತು ಹಾಡಿರಿ. ಮನಸ್ಸಿನಿಂದ ನೃತ್ಯ ಮಾಡಿರಿ, ಕಾಲಿನಿಂದಲ್ಲ. ಕಾಲಿನಿಂದ ನೃತ್ಯ ಮಾಡುವುದು ಆರಂಭಿಸಿದರೆ ಹೊಡೆದಾಟವಾಗಿಬಿಡುವುದು. ಆದರೆ ಮಕ್ಕಳು ನೃತ್ಯವನ್ನು ಮಾಡುತ್ತಿದ್ದಾರೆ ಮತ್ತು ಮಧುರಾತಿ ಮಧುರ ತಂದೆಯ ಮಹಿಮೆ ಮತ್ತು ತಮ್ಮ ಅಲೌಕಿಕ ಮಹಿಮೆಯ ಗೀತೆಯನ್ನು ಬಹಳ ಹಾಡುತ್ತಿರುವುದನ್ನು

ಬಾಪ್‌ದಾದಾರವರು ನೋಡುತ್ತಿದ್ದಾರೆ. ಬಾಬಾರವರಿಗೆ ನಿಮ್ಮ ಮನಸ್ಸಿನ ಧ್ವನಿಯು ತಲುಪುತ್ತಿದೆ. ಎಲ್ಲಾ ದೇಶಗಳಿಂದ ಧ್ವನಿಯು ಬರುತ್ತಿದೆ. ತಂದೆಯ ಧ್ವನಿಯು ಕೇಳುತ್ತಿದ್ದೀರಿ ಮತ್ತು ತಂದೆಯು ಮಕ್ಕಳ ಧ್ವನಿಯನ್ನು ಕೇಳುತ್ತಿದ್ದಾರೆ. ತಂದೆಯು ಹೇಳುತ್ತಿದ್ದಾರೆ ಹೇ ವಿಶ್ವದ ಬಹಳ-ಬಹಳ ಸ್ನೇಹಿ ಮಕ್ಕಳೇ! ಚೆನ್ನಾಗಿ ನೃತ್ಯ ಮಾಡಿರಿ, ಚೆನ್ನಾಗಿ ಹಾಡಿ ಮತ್ತೇನು ಕೆಲಸವಿದೆ? ಬ್ರಾಹ್ಮಣರ ಕೆಲಸವೇನಾಗಿದೆ? ಯೋಗ ಜೋಡಿಸುವುದು ಎಂದರೆ ಏನು? ಪರಿಶ್ರಮವೇನಾದರೂ ಇದೆಯೇ? ಯೋಗದ ಅರ್ಥವೇ ಆತ್ಮ ಮತ್ತು ಪರಮಾತ್ಮನ ಮಿಲನವಾಗಿದೆ. ಮಿಲನದಲ್ಲಿ ಏನಾಗುತ್ತದೆ? ಖುಷಿಯಲ್ಲಿ ನೃತ್ಯ ಮಾಡಿರಿ. ತಂದೆಯ ಮಹಿಮೆಯ ಮಧುರಾತಿ ಮಧುರ ಗೀತೆಯನ್ನು ಹೃದಯವು ಸ್ವತಃವಾಗಿಯೇ ಹಾಡುತ್ತಿದೆ. ಬ್ರಾಹ್ಮಣರ ಕೆಲಸವೇ ಇದಾಗಿದೆ, ಹಾಡಿರಿ ಮತ್ತು ನೃತ್ಯ ಮಾಡಿರಿ. ಇದು ಕಷ್ಟವೇ? ನೃತ್ಯ ಮಾಡುವುದು ಮತ್ತು ಹಾಡುವುದು ಕಷ್ಟವೇ? ಇಲ್ಲ ಅಲ್ಲವೇ! ಯಾರಿಗೆ ಕಷ್ಟವೆನಿಸುತ್ತದೆಯೋ ಅವರು ಕೈ ಎತ್ತಿರಿ. ಇತ್ತೀಚೆಗಂತು ನೃತ್ಯ ಮಾಡುವ ಹಾಡುವ ಸೀಜನ್ ಆಗಿದೆ, ಅಂದಾಗ ನೀವು ಏನು ಮಾಡಬೇಕು? ನೃತ್ಯ ಮಾಡಿರಿ, ಹಾಡಿರಿ. ಸಹಜವಾಗಿದೆಯಲ್ಲವೇ? ಸಹಜವಾಗಿದೆ ಎಂದಮೇಲೆ ಕತ್ತನ್ನು ಅಲುಗಾಡಿಸಿರಿ. ಕಷ್ಟವಿಲ್ಲವೇ? ಉದ್ದೇಶಪೂರ್ವಕವಾಗಿ ಸಹಜದಿಂದ ದೂರವಾಗಿ ಕಷ್ಟದಲ್ಲಿ ಹೋಗಿಬಿಡುತ್ತಿದ್ದೀರಿ.

ಕಷ್ಟವಲ್ಲ, ಬಹಳ ಸಹಜವಿದೆ ಏಕೆಂದರೆ ತಂದೆಯು ತಿಳಿದುಕೊಂಡಿದ್ದಾರೆ ಅರ್ಧಕಲ್ಪದಿಂದ ಕಷ್ಟದ ಜೀವನ ನಡೆಸಿದ್ದಾರೆ ಇದಕ್ಕಾಗಿ ಈ ಸಮಯ ಸಹಜವಾಗಿದೆ. ಕಷ್ಟವೇನಾದರೂ ಇದೆಯೇ? ಕೆಲವೊಮ್ಮೆ ಕಷ್ಟವೆನಿಸುತ್ತದೆಯೇ? ಹೇಗಾದರೆ ನಡೆಯುತ್ತಾ- ನಡೆಯುತ್ತಾ ಯಾರಾದರೂ ದಾರಿಯನ್ನು ಮರೆತು ಬೇರೆ ದಾರಿಯಲ್ಲಿ ಹೋದರೆ ಕಷ್ಟವೆನಿಸುತ್ತದೆಯಲ್ಲವೇ. ಜ್ಞಾನ ಮಾರ್ಗವು ಕಷ್ಟವಲ್ಲ. ಬ್ರಾಹ್ಮಣ ಜೀವನ ಕಷ್ಟವಲ್ಲ. ಬ್ರಾಹ್ಮಣರ ಬದಲಾಗಿ ಕ್ಷತ್ರಿಯರಾದಾಗ ಕ್ಷತ್ರಿಯರ ಕೆಲಸವೇ ಆಗಿದೆ ಹೊಡೆದಾಡುವುದು, ಜಗಳವಾಡುವುದು.. ಅದಂತೂ ಕಷ್ಟವೇ ಆಗುತ್ತದೆಯಲ್ಲವೇ! ಯುದ್ಧ ಮಾಡುವುದು ಕಷ್ಟವಾಗುತ್ತದೆ, ಆನಂದವಾಗಿರುವುದು ಸಹಜವಾಗುತ್ತದೆ.

ಡಬಲ್ ವಿದೇಶಿಯರು ಮೋಜು ಆಚರಿಸುವವರಲ್ಲವೇ! ಒಂದು ಕೈಯ ಚಪ್ಪಾಳೆಯನ್ನು ತಟ್ಟಿರಿ. ಮೋಜಿನಲ್ಲಿದ್ದೀರಾ? ಅಲ್ಲಿ ಹೋಗಿ ತಬ್ಬಿಬ್ಬಾಗುವುದಿಲ್ಲವೇ? ನೋಡಿ, ಇಂದು ಶಿವ ಜಯಂತಿಯ ಮಹತ್ವ ಎರಡು ವಿಷಯಗಳದ್ದಾಗಿದೆ. ಒಂದು ಈ ದಿನ ವ್ರತವನ್ನು ಇಡುತ್ತಾರೆ. ಡಬಲ್ ವಿದೇಶಿಯರಂತೂ ಆಚರಿಸುವುದಿಲ್ಲ. ಭಾರತದಲ್ಲಿಯೇ ಆಚರಿಸುತ್ತಾರೆ, ಈ ದಿನದ ಮಹತ್ವವಾಗಿದೆ - ವ್ರತವನ್ನು ಇಡುವುದು ಮತ್ತು ಇನ್ನೊಂದು ಜಾಗರಣೆ ಮಾಡುವುದು. ನೀವು ಎಲ್ಲರು ವ್ರತವನ್ನೂ ತೆಗೆದುಕೊಂಡಿದೀರಲ್ಲವೇ? ಪಕ್ಕಾ ವ್ರತವನ್ನು ತೆಗೆದುಕೊಂಡಿದ್ದೀರಾ? ಅಥವಾ ಕೆಲವೊಮ್ಮೆ ಕಚ್ಚಾ, ಕೆಲವೊಮ್ಮೆ ಪಕ್ಕಾ ಆಗಿದೆಯೇ? ಕಾಯಿಯಾಗಿರುವ ವಸ್ತು ಇಷ್ಟವಾಗುತ್ತದೆಯೇ? ಪಕ್ವವಾಗಿರುವುದು ಎಲ್ಲವೂ ಇಷ್ಟವಾಗುತ್ತದೆಯಲ್ಲವೇ. ಯಾವ ವ್ರತ ತೆಗೆದುಕೊಂಡಿದ್ದೀರಿ? ಬಾಪ್‌ದಾದಾರವರು ಎಲ್ಲದಕ್ಕಿಂತ ಮೊದಲನೇಯದಾಗಿ ಯಾವ ವ್ರತವನ್ನು ಕೊಟ್ಟರು? ಯಾವಾಗ ಸ್ಮೃತಿಯ ತಿಲಕವನ್ನು ಇಟ್ಟರೋ ಆಗ ಮೊಟ್ಟ ಮೊದಲನೆಯದಾಗಿ ಯಾವ ವ್ರತವನ್ನು ತೆಗೆದುಕೊಂಡಿದ್ದೀರಿ? ನೆನಪಿದೆಯಲ್ಲವೇ? ಸಂಪೂರ್ಣ ಪವಿತ್ರ ಭವ! ತಂದೆಯು ಹೇಳಿದರು ಮತ್ತು ಮಕ್ಕಳು ಧಾರಣೆ ಮಾಡಿದರು. **ಪವಿತ್ರತೆಯ ವ್ರತ ಎಂದರೆ ಕೇವಲ ಬ್ರಹ್ಮಚರ್ಯದ ವ್ರತವಲ್ಲ ಆದರೆ ಬ್ರಹ್ಮಾ ತಂದೆಯ ಸಮಾನ ಪ್ರತಿ ಸಂಕಲ್ಪ, ಮಾತು ಮತ್ತು ಕರ್ಮದಲ್ಲಿ ಪವಿತ್ರತೆ – ಇದಕ್ಕೇ ಬ್ರಹ್ಮಚಾರಿ ಮತ್ತು ಬ್ರಹ್ಮಾಚಾರಿ**

**ಎಂದು ಹೇಳಲಾಗುತ್ತದೆ. ಪ್ರತಿಯೊಂದು ಮಾತಿನಲ್ಲಿ ಪವಿತ್ರತೆಯ ಪ್ರಕಂಪನಗಳು ಸಮಾವೇಶವಾಗಿದೆ. ಪ್ರತಿಯೊಂದು ಸಂಕಲ್ಪದಲ್ಲಿ ಪವಿತ್ರತೆಯ ಮಹತ್ವವಿದೆ. ಪ್ರತಿಯೊಂದು ಕರ್ಮದಲ್ಲಿ, ಕರ್ಮ ಮತ್ತು ಯೋಗ ಅರ್ಥಾತ್ ಕರ್ಮಯೋಗಿಯ ಅನುಭವವಿರುವುದನ್ನೇ ಬ್ರಹ್ಮಾಚಾರಿ ಎಂದು ಹೇಳಲಾಗುತ್ತದೆ. ಬ್ರಹ್ಮಾ ತಂದೆಯನ್ನು ನೋಡಿದ್ದೀರಲ್ಲವೇ ಪ್ರತಿಯೊಂದು ಮಾತು ಮಹಾವಾಕ್ಯದಂತೆ ಇರುತ್ತಿತ್ತು. ಸಾಧಾರಣವಾಗಿರುತ್ತಿರಲಿಲ್ಲ. ಏಕೆಂದರೆ ನಿಮ್ಮ ಜನ್ಮವೇ ಸಾಧಾರಣವಲ್ಲ, ಅಲೌಕಿಕವಾಗಿದೆ. ಅಲೌಕಿಕತೆಯ ಅರ್ಥವೇ ಆಗಿದೆ ಪವಿತ್ರತೆ. ಪ್ರತಿ ದಿನ ರಾತ್ರಿ ತಾವೇ ತಮ್ಮ ಟೀಚರ್ ಆಗಿ ಚೆಕ್ ಮಾಡಿಕೊಳ್ಳಿರಿ ಮತ್ತು ಪರ್ಸೆಂಟೇಜ್ ಪ್ರಮಾಣ ತಮಗೆ ತಾವೇ ಅಂಕಗಳನ್ನು ಕೊಡಿ, 100 ಪ್ರತಿಶತರಾಗಬೇಕು, ಆದರೆ ಪ್ರತಿ ದಿನ ತಮ್ಮನ್ನು ತಾವು ನೋಡಿಕೊಳ್ಳಿರಿ, ಬೇರೆಯವರನ್ನು ನೋಡಬಾರದು** . ತಮ್ಮ ಬದಲಾಗಿ ಅನ್ಯರನ್ನು ನೋಡಲು ತೊಡಗುತ್ತೀರಿ, ಅದು ಸಹಜವೆನಿಸುತ್ತಿದೆ ಎಂದು ಬಾಪ್‌ದಾದಾರವರು ನೋಡಿದರು. ತಮ್ಮನ್ನು ನೋಡಿಕೊಳ್ಳಿರಿ ಇಂದು ಸಂಕಲ್ಪ, ಮಾತು ಮತ್ತು ಕರ್ಮದಲ್ಲಿ ಎಷ್ಟು ಶೇಕಡವಿತ್ತು?

ನೀವು ಈ ವರ್ಷ ನಾಲ್ಕಾರು ಕಡೆ ಯಾವ ಸಂದೇಶ ಕೊಟ್ಟಿದ್ದೀರಿ? ಪರಿವರ್ತನೆಯ ಬಗ್ಗೆ ಎಲ್ಲಾ ಕಾರ್ಯಕ್ರಮದಲ್ಲಿ ಹೇಳಿದ್ದೀರಿ. ಎಲ್ಲೆಲ್ಲಿ ಭಾಷಣ ಮಾಡಿದ್ದೀರೋ ಅಲ್ಲಿ ಪರಿವರ್ತನೆಯ ವಿಷಯದ ಮೇಲೆ ಚೆನ್ನಾಗಿ ಭಾಷಣ ಮಾಡಿದ್ದೀರಿ. ಈ ವರ್ಷ ನಾಲ್ಕಾರು ಕಡೆ ಸೇವೆಯಲ್ಲಿ ಬೇರೆಯವರಿಗೂ ಪರಿವರ್ತನೆಯ ಲಕ್ಷ್ಯ ಬಹಳ ಚೆನ್ನಾಗಿ ಆಡಂಭರದಿಂದ ಕೊಟ್ಟಿದ್ದೀರಿ, ಬಾಪ್‌ದಾದಾರವರು ಖುಷಿಯಾಗಿದ್ದಾರೆ. ತಾವು ತಮಗಾಗಿಯೂ ಇದನ್ನು ಚೆಕ್ ಮಾಡಿಕೊಳ್ಳಿರಿ - ಪ್ರತಿ ದಿನ ಎಷ್ಟು ಪರ್ಸೆಂಟೇಜಲ್ಲಿ ಪರಿವರ್ತನೆಯಾಗಿದೆ? ಪರಿವರ್ತನೆಯು ಏರುವ ಕಲೆಯದಾಗಿರಲಿ, ಇಳಿಯುವ ಕಲೆಯದ್ದಲ್ಲ. ಬಾಪ್‌ದಾದಾರವರು ಸಹ ಪ್ರತಿಯೊಬ್ಬ ಮಗುವಿನ ಚಾರ್ಟ್ ನೋಡುತ್ತಾರೆ. ಎಲ್ಲಾ ಮಕ್ಕಳದ್ದು ನೋಡುತ್ತಾರೆಯೇ ಅಥವಾ ಕೆಲ ವಿಶೇಷ ಆತ್ಮರದ್ದು ನೋಡುತ್ತಾರೆಯೇ! ಎಂದು ನೀವು ಯೋಚಿಸುತ್ತಿದ್ದೀರಿ. ಬಾಪ್‌ದಾದಾರವರು ಎಲ್ಲಾ ಮಕ್ಕಳ ಚಾರ್ಟ ಕೆಲ-ಕೆಲವೊಮ್ಮೆ ನೋಡುತ್ತಾರೆ, ಪ್ರತಿ ದಿನ ನೋಡುವುದಿಲ್ಲ ಆದರೆ ಕೆಲ-ಕೆಲವೊಮ್ಮೆ ನೋಡುತ್ತಾರೆ - ಅವರು ಅಂತಿಮದವರಾಗಿರಲಿ, ಅಥವಾ ಮೊದಲನೇಯವರಾಗಿರಲಿ ಎಲ್ಲರೂ ನಗುತ್ತಿದ್ದೀರೆಂದ ಮೇಲೆ ಬಾಪ್‌ದಾದಾರವರೇ ಚಾರ್ಟ್ ಏನಾಗಿದೆಯೆಂದು ತಿಳಿಸುತ್ತಾರೆ? ಈ ದಿನ ಆಚರಿಸುವುದಾಗಿದೆ, ಅದಕ್ಕಾಗಿ ಇಂದು ತಿಳಿಸುವುದಿಲ್ಲ. ಆದರೆ ಮುಂದಕ್ಕೆ ಎಚ್ಚರಿಸುತ್ತಿದ್ದಾರೆ ಇಂದಿನ ದಿನದ ಏನು ಮಹತ್ವವಿದೆ? ವ್ರತ ಇಡುವುದು ಅರ್ಥಾತ್ ದೃಢ ಸಂಕಲ್ಪ ಮಾಡುವುದು. ವ್ರತವನ್ನು ಸತ್ಯ ಭಕ್ತರೆಂದೂ ಮುರಿಯುವುದಿಲ್ಲ, ಬಾಪ್‌ದಾದಾರವರು ಪುನಃ ಮುಂದಕ್ಕೆ ಎಚ್ಚರಿಸುತ್ತಿದ್ದಾರೆ ಈಗಲೂ ಸಹ ಮೊದಲನೇ ಫೌಂಡೇಷನ್ ಸಂಕಲ್ಪದ ಶಕ್ತಿ ಕೆಲ-ಕೆಲವೊಮ್ಮೆ ಹೆಚ್ಚಾಗಿ ವ್ಯರ್ಥಕ್ಕಾಗಿ ಉಪಯೋಗಿಸುತ್ತಿದ್ದಾರೆ ಮತ್ತು ನಕರಾತ್ಮಕ ಸಂಕಲ್ಪಗಳು ವ್ಯರ್ಥಕ್ಕಿಂತಲೂ ಸ್ವಲ್ಪ ಕಡಿಮೆಯಿದೆ. ಈ ಸಂಕಲ್ಪ ಶಕ್ತಿಯ ಉಪಯೋಗ ಎಷ್ಟು ಸ್ವನ ಪ್ರತಿ ಅಥವಾ ವಿಶ್ವದ ಪ್ರತಿ ಮಾಡುತ್ತೀರೋ ಅಷ್ಟು ಇನ್ನೂ ಹೆಚ್ಚಿಸಿರಿ ಏಕೆಂದರೆ ಸಂಕಲ್ಪದ ಆಧಾರದ ಮೇಲೆ ಮಾತು ಮತ್ತು ಕರ್ಮವಿರುತ್ತದೆ, ಅದಕ್ಕಾಗಿ ಸಂಕಲ್ಪ ಶಕ್ತಿಯನ್ನು ಪರಿವರ್ತನೆ ಮಾಡಿ. ಅದು ವ್ಯರ್ಥ ಮತ್ತು ನಕಾರಾತ್ಮಕವಾಗಿ ಹೋಗುತ್ತದೆ, ಅದನ್ನು ಪರಿವರ್ತನೆ ಮಾಡಿ ವಿಶ್ವ ಕಲ್ಯಾಣದ ಪ್ರತಿ ಕಾರ್ಯದಲ್ಲಿ ತೊಡಗಿಸಿ. ಬಾಪ್‌ದಾದಾರವರು ಸಂಕಲ್ಪದ ಖಜಾನೆಯನ್ನು ಸರ್ವ ಶ್ರೇಷ್ಠವೆಂದು ಒಪ್ಪುತ್ತಾರೆ ಅದಕ್ಕೆ

ಈ ಸಂಕಲ್ಪದ ಖಜಾನೆಯ ಪ್ರತಿ ಉಳಿತಾಯದ ಅವತಾರವಾಗಿರಿ. ಈ ದಿನವನ್ನು ಅವತರಣೆಯ ದಿನವೆಂದು ಹೇಳಲಾಗುತ್ತದೆ, ಬಾಪ್‌ದಾದಾರವರಿಗೆ ಎಲ್ಲಾ ಮಕ್ಕಳ ಪ್ರತಿ ಇದೇ ಶುಭ ಆಸೆಯಿದೆ ಇಂದು ಶಿವ ಅವತರಣೆಯ ಜೊತೆ ನೀವೆಲ್ಲರೂ ಉಳಿತಾಯದ ಅವತಾರವಾಗಿ. ಸಂಕಲ್ಪದಲ್ಲಿ ಉಳಿತಾಯದ ಅರ್ಥವಾಗಿದೆ ವ್ಯರ್ಥದಿಂದ ಉಳಿಸುವುದು, ಆಗ ಬೇರೆ ಎಲ್ಲಾ ಖಜಾನೆಗಳು ಸ್ವತಃವಾಗಿ ಉಳಿತಾಯವಾಗುವುದು. ೯೯ರಲ್ಲಿ ಏನಾಗುವುದು? ೯೯ ಶುರುವಾಗಿಬಿಟ್ಟಿದೆ. ಮೊದಲು ಯೋಚಿಸುತ್ತಿದ್ದೀರಿ, ೯೯ರಲ್ಲಿ ಏನಾಗುವುದು? ಏನಾದರೂ ಆಯಿತೇ? ಫೆಬ್ರವರಿ ಬಂದಿತು. ಒಂದುವೇಳೆ ಆದರೂ ಸಹ ನಿಮಗೆ ಏನಾಗಿದೆ? ನಿಮಗೆ ಏನಾದರೂ ನಷ್ಟವಿದೆಯೇ? ಭಯವಿದೆಯೇ? ಏನಾಗುವುದು, ಅದರ ಭಯವಿರುತ್ತದೆಯೇ? ನಿಮಗಾಗಿ ಒಳ್ಳೆಯದೇ ಆಗುವುದು. ಹೊಡೆದಾಟವನ್ನು ತೋರಿಸುತ್ತಾರೆ, ಒಳ್ಳೆಯ ಮಾತುಗಳನ್ನು ತೋರಿಸುತ್ತಾರೆ. ಆಟದಲ್ಲಿ ಭಯವಿರುತ್ತದೆಯೇ? ಏನಾಗುವುದು, ಏನಾಯಿತು, ಏನಾಯಿತು? ಹೀಗೆ ಯೋಚಿಸುವಿರೇ? ಆಟವನ್ನು ಮೋಜಿನಿಂದ ಕುಳಿತು ನೋಡುತ್ತಾರೆ. ಇದು ಸಹ ಬೇಹದ್ದಿನ ಆಟವಾಗಿದೆ. ಒಂದುವೇಳೆ ಸ್ವಲ್ಪ ಭಯ ಅಥವಾ ಗಾಬರಿಯಾದರೆ - ಏನಾಗಿ ಹೋಯಿತು, ಏನಾಗಿ ಹೋಯಿತು ... ಹೀಗಂತು ಆಗಬಾರದು, ಏಕೆ ಆಯಿತು ಅಂದಾಗ ಇಂತಹ ಸ್ಥಿತಿಯವರಿಗೆ ಪ್ರಭಾವ ಬಿಳುತ್ತದೆ. ಒಳ್ಳೆಯದರಲ್ಲಿ ಒಳ್ಳೆಯ ಸ್ಥಿತಿ ಮತ್ತು ಏರುಪೇರಿನ ಸ್ಥಿತಿಯಲ್ಲಿ ಸ್ವಯಂ ಸಹ ಏರುಪೇರಿನಲ್ಲಿ ಬಂದು ಬಿಡುತ್ತಾರೆ, ಇದಕ್ಕಾಗಿ ೯೯ ಆಗಲಿ ಅಥವಾ 2000 ಆಗಲಿ, ನಿಮಗೇನು? ಆಟ ನಡೆಯಲು ಬಿಡಿ. ಮಜಾದಿಂದ ನೋಡಿ. ಗಾಬರಿಯಾಗಬಾರದು. ಅಯ್ಯೋ ಇದೇನಾಗಿ ಹೋಯಿತು! ಎಲ್ಲರೂ ಕೇಳುತ್ತಾರೆ ೯೯ರಲ್ಲಿ ಏನಾಗುವುದು? ಏನಾದರೂ ಆಗುವುದೋ, ಇಲ್ಲವೋ ಎಂಬುದು ಸಂಕಲ್ಪದಲ್ಲಿಯೂ ಬರಬಾರದು. ಬಾಪ್‌ದಾದಾರವರು ಹೇಳುತ್ತಾರೆ- **ನೀವೇ ಪ್ರಕೃತಿಗೆ ಸೇವೆಯನ್ನು ಕೊಟ್ಟಿದ್ದೀರಿ ಚೆನ್ನಾಗಿ ಸ್ವಚ್ಛ ಮಾಡಲಿ ಎಂದು, ಅದಕ್ಕೆ ದೊಡ್ಡ ದೊಡ್ಡ ಪೊರಕೆಯನ್ನು ಕೊಟ್ಟಿದ್ದೀರಿ, ಸ್ವಚ್ಛ ಮಾಡಿ ಎಂದು. ಅಂದಾಗ ಗಾಬರಿ ಏಕೆ ಆಗುತ್ತೀರಿ? ನಿಮ್ಮ ಆದೇಶದಿಂದ ಅದು ಸ್ವಚ್ಛ ಮಾಡಿಸುತ್ತದೆ ಅಂದಾಗ ನೀವು ಏಕೆ ಏರುಪೇರಿನಲ್ಲಿ ಬರುತ್ತೀರಿ? ನೀವೇ ಆದೇಶ ಕೊಟ್ಟಿದ್ದೀರಿ. ಅಚಲ-ಸ್ಥಿರವಾಗಿ ಮನಸ್ಸು ಬುದ್ಧಿಯನ್ನು ಒಂದೇ ಬಾರಿ ಶಕ್ತಿಶಾಲಿಯನ್ನಾಗಿ ಮಾಡಿ ಅಚಲ, ಸ್ಥಿರವಾದ ಸ್ಥಿತಿಯಲ್ಲಿ ಸ್ಥಿತರಾಗಿಬಿಡಿ. ಪ್ರಕೃತಿಯ ಆಟವನ್ನು ನೋಡುತ್ತಾ ಹೋಗಿ. ಗಾಬರಿಯಾಗಬೇಡಿ. ನೀವು ಅಲೌಕಿಕರಾಗಿದ್ದೀರಿ, ಸಾಧಾರಣವಲ್ಲ. ಸಾಧಾರಣ ಜನರು ಏರುಪೇರಿನಲ್ಲಿ ಬರುವರು, ಗಾಬರಿಯಾಗುವರು. ಅಲೌಕಿಕ, ಮಾಸ್ಟರ್ ಸರ್ವಶಕ್ತಿವಂತ ಆತ್ಮರು ಆಟವನ್ನು ನೋಡುತ್ತಾ ತಮ್ಮ ವಿಶ್ವ ಕಲ್ಯಾಣದ ಕಾರ್ಯದಲ್ಲಿ ವ್ಯಸ್ತರಾಗಿರುವರು. ಒಂದುವೇಳೆ ಮನಸ್ಸು ಮತ್ತು ಬುದ್ಧಿಯನ್ನು ಫ್ರೀಯಾಗಿಟ್ಟರೇ ಗಾಬರಿಯಾಗುವಿರಿ. ಮನಸ್ಸು ಮತ್ತು ಬುದ್ಧಿಯಿಂದ ಲೈಟ್ ಹೌಸ್ ಆಗಿ, ಲೈಟ್ ಹರಡಿಸಿರಿ, ಈ ಕಾರ್ಯದಲ್ಲಿ ವ್ಯಸ್ತರಾಗಿ ಆಗ ವ್ಯಸ್ತ ಆತ್ಮರಿಗೆ ಭಯವಾಗುವುದಿಲ್ಲ, ಸಾಕ್ಷಿತನವಿರುವುದು**; ಬೇರೆ ಏನೇ ಏರುಪೇರಿದ್ದರೆ ತಮ್ಮ ಬುದ್ಧಿಯನ್ನು ಸದಾ ಸ್ಪಷ್ಟವಾಗಿಟ್ಟುಕೊಂಡು, ಏಕೆ? ಏನು? ಎಂಬ ಪ್ರಶ್ನೆಗಳಲ್ಲಿ ಬುದ್ಧಿಯನ್ನು ವ್ಯಸ್ತವಾಗಿ ಅಥವಾ ಬುದ್ಧಿಯನ್ನು ತುಂಬಿಸಿಟ್ಟುಕೊಳ್ಳಬೇಡಿ, ಖಾಲಿ ಇಟ್ಟುಕೊಳ್ಳಿ. ಒಬ್ಬ ತಂದೆ ಮತ್ತು ನಾನು ... ಆಗ ಸಮಯಾನುಸಾರ ಪತ್ರ, ಟೆಲಿಫೋನ್, ಟಿ.ವಿ ಅಥವಾ ನಿಮ್ಮ ಮುಂದೆ ಏನೆಲ್ಲಾ ಸಾಧನಗಳು ಇವೆಯೂ, ಅವು ತಲುಪಿಲ್ಲವೆಂದರೂ ಬಾಪ್‌ದಾದಾರವರ ಡೈರೆಕ್ಷನ್ ಸ್ಪಷ್ಟವಾಗಿ ಗೊತ್ತಾಗುತ್ತದೆ (ಕ್ಯಾಚ್ ಮಾಡುವಿರಿ). ಈ ವಿಜ್ಞಾನದ ಸಾಧನಗಳನ್ನು ಎಂದೂ ಆಧಾರವನ್ನಾಗಿ ಮಾಡಿಕೊಳ್ಳಬೇಡಿ. ಉಪಯೋಗಿಸಿ ಆದರೆ ಸಾಧನಗಳ ಆಧಾರದ ಮೇಲೆ ತಮ್ಮ ಜೀವನವನ್ನು ತಾಯಾರು

ಮಾಡಿಕೊಳ್ಳಬೇಡಿರಿ. ಕೆಲವೊಮ್ಮೆ ವಿಜ್ಞಾನದ ಸಾಧನವಿದ್ದರೂ ಉಪಯೋಗಿಸಲು ಸಾಧ್ಯವಿಲ್ಲ ಇದಕ್ಕಾಗಿ ಸೈಲೆನ್ಸ್ ಸಾಧನವಾಗಿದೆ-ಎಲ್ಲೇ ಇರಿ, ಎಂತಹದ್ದೇ ಪರಿಸ್ಥಿತಿಯಿರಲಿ ಬಹಳ ಸ್ಪಷ್ಟ ಮತ್ತು ಬಹಳ ಬೇಗ ಕೆಲಸದಲ್ಲಿ ಬರುವುದು. ಆದರೆ ತಮ್ಮ ಬುದ್ಧಿಯ ಲೈನ್ ಸ್ಪಷ್ಟವಾಗಿಟ್ಟುಕೊಳ್ಳಬೇಕು. ತಿಳಿಯಿತೇ. ನೀವೇ ಆಹ್ವಾನೆಯನ್ನು ಮಾಡುತ್ತಿದ್ದೀರಿ ಬೇಗ ಬೇಗ ಸ್ವರ್ಣಿಮ ಯುಗವು ಬರಲಿ ಎಂದು. ಸ್ವರ್ಣಿಮಯುಗದಲ್ಲಿ ಈ ಸ್ವಚ್ಛತೆ ಬೇಕಲ್ಲವೇ. ಪ್ರಕೃತಿ ಚೆನ್ನಾಗಿ ಸ್ವಚ್ಛ ಮಾಡುತ್ತದೆ.

ಇಂದು ಸಂಕಲ್ಪವಲ್ಲ ಆದರೆ ಯಾವ ದೃಢ ಸಂಕಲ್ಪವನ್ನು ಮಾಡಿದಿರಿ? ಏಕಾನಾಮಿಯ (ಉಳಿತಾಯದ) ಅವತಾರವಾಗಲೇಬೇಕು. ಸಂಕಲ್ಪದಲ್ಲಿ, ಮಾತಿನಲ್ಲಿ, ಸಾಧಾರಣ ಕರ್ಮದ ಏಕಾನಾಮಿ. ಮತ್ತು ಎರಡನೇಯ ವಿಷಯ- ಸದಾ ಬುದ್ಧಿಯನ್ನು ಸ್ಪಷ್ಟವಾಗಿಟ್ಟುಕೊಳ್ಳಿ. ಇದನ್ನೇ ಪರಮಾತ್ಮ ಇನ್ನೊಂದು ಮಾತಿನಲ್ಲಿ "ಸತ್ಯ ಹೃದಯದ ಮೇಲೆ ತಂದೆಯು ರಾಜಿಯಾಗುತ್ತಾರೆ (ಪ್ರಸನ್ನರಾಗುತ್ತಾರೆ)" ಎಂದು ಹೇಳುತ್ತಾರೆ. ಸತ್ಯ ಹೃದಯ, ಸ್ವಚ್ಛ ಹೃದಯ. ವರ್ತಮಾನ ಸಮಯದಲ್ಲಿ ಸತ್ಯತೆ ಮತ್ತು ಸ್ವಚ್ಛತೆಯ ಅವಶ್ಯಕತೆಯಿದೆ. ಹೃದಯದಲ್ಲಿ ಸತ್ಯತೆ, ಪರಿವಾರದಲ್ಲಿಯೂ ಸತ್ಯತೆ ಮತ್ತು ತಂದೆಯೊಂದಿಗೂ ಸತ್ಯತೆ. ತಿಳಿಯಿತೇ. ಇಂದು ಹೇಳಬಾರದಾಗಿತ್ತು ಆದರೆ ಹೇಳಿಬಿಟ್ಟರು. ಬಾಪ್‌ದಾದಾರವರ ಪ್ರೀತಿಯಿದೆಯಲ್ಲವೇ, ಸ್ವಲ್ಪ ಬಲಹೀನತೆಯನ್ನೂ ಬಾಪ್‌ದಾದಾರವರಿಗೆ ನೋಡಲಾಗುತ್ತಿಲ್ಲ. ಬಾಪ್‌ದಾದಾರವರು ಸದಾ ಪ್ರತಿಯೊಂದು ಮಗುವನ್ನು ತಮ್ಮ ಹಾಗೆ ಸಂಪೂರ್ಣವಾಗಿ ನೋಡಲು ಬಯಸುತ್ತಾರೆ.

ನಾಲ್ಕಾರು ಕಡೆ ಗೊಂದಲವಿದೆ, ಪ್ರಕೃತಿಯ ಎಲ್ಲಾ ತತ್ವಗಳು ಬಹಳ ಏರುಪೇರು ಮಾಡುತ್ತಿವೆ, ಒಂದು ಕಡೆಯು ಏರುಪೇರಿನಿಂದ ಮುಕ್ತರಿಲ್ಲ, ವ್ಯಕ್ತಿಗಳ ಏರುಪೇರು ಮತ್ತು ಪ್ರಕೃತಿಯ ಏರುಪೇರು ಇವೆ, ಇಂತಹ ಸಮಯದಲ್ಲಿ , ಈ ಸೃಷ್ಟಿಯಲ್ಲಿ ನಾಲ್ಕಾರು ಕಡೆ ಏರುಪೇರಿದ್ದಾಗ ನೀವು ಏನು ಮಾಡುವಿರಿ? ಸೇಫ್ಟಿ (ಸುರಕ್ಷತೆ)ಯ ಸಾಧನ ಯಾವುದಾಗಿದೆ? ಸೆಕೆಂಡಿನಲ್ಲಿ ತಮ್ಮನ್ನು ವಿದೇಹಿ, ಅಶರೀರಿ ಅಥವಾ ಆತ್ಮಾಭಿಮಾನಿಗಳನ್ನಾಗಿ ಮಾಡಿಕೊಳ್ಳಿ ಆಗ ಏರುಪೇರಿನಲ್ಲಿ ಅಚಲರಾಗಿರುವಿರಿ. ಇದರಲ್ಲಿ ಸಮಯವು ಬೇಕಾಗುತ್ತದೆಯೇ? ಏನಾಗುವುದು? ಈಗ ಟ್ರಾಯಲ್ (ಪರಿಕ್ಷಿಸಿ) ಮಾಡಿ - ಒಂದು ಸೆಕೆಂಡಿನಲ್ಲಿ ಮನಸ್ಸು - ಬುದ್ಧಿಯನ್ನು ಎಲ್ಲಿ ಬೇಕೋ ಅಲ್ಲಿ ಸ್ಥಿತ ಮಾಡಬಹುದೇ? (ಡ್ರಿಲ್) ಇದಕ್ಕೆ ಹೇಳಲಾಗುತ್ತದೆ- ಸಾಧನೆ. ಒಳ್ಳೆಯದು.

**ದೇಶ-ವಿದೇಶದ ನಾಲ್ಕಾರು ಕಡೆಯ ತಂದೆಯ ಪ್ರೀತಿಯಲ್ಲಿ ಲವಲೀನವಾಗಿರುವ ಆತ್ಮರಿಗೆ, ಸದಾ ಸ್ವಯಂನ್ನು ಬ್ರಹ್ಮಾಚಾರಿ ಸ್ಥಿತಿಯಲ್ಲಿ ಸ್ಥಿತ ಮಾಡುವಂತಹ ಸ್ನೇಹಿ, ಸಹಯೋಗಿ ಮಕ್ಕಳಿಗೆ, ಸದಾ ಏಕ್ ನಾಮಿ (ಒಬ್ಬ ತಂದೆ) ಮತ್ತು ಏಕಾನಾಮಿ (ಉಳಿತಾಯ)ಯ ಕಾರ್ಯದಲ್ಲಿ ತೊಡಗಿಸುವಂತಹ ಧೈರ್ಯವಂತ ಮಕ್ಕಳಿಗೆ, ಸದಾ ಏರುಪೇರಿನಲ್ಲಿಯೂ ಅಚಲರಾಗಿರುವಂತಹ ನಿರ್ಭಯ ಆತ್ಮರಿಗೆ, ಸದಾ ಮೋಜನ್ನು ಆಚರಿಸುವಂತಹವರು, ತಂದೆಯ ಸಮೀಪ ಇರುವಂತಹ ಮಕ್ಕಳಿಗೆ ತಂದೆಯ ನೆನಪು ಪ್ರೀತಿ ಮತ್ತು ನಮಸ್ತೆ.**

ರಿವೈಸ್ ಕೋರ್ಸ್ 13-02-1999.

***ಶಿವ ಅವತರಣೆ ಮತ್ತು ಉಳಿತಾಯದ ಅವತಾರ***

ಬೇಗ ಬೇಗ ಸ್ವರ್ಣಿಮ ಯುಗವು ಬರಲಿ ಎಂದು ನೀವೇ ಆಹ್ವಾನ ಕೊಟ್ಟಿದ್ದೀರಿ. ನೀವೇ ಪ್ರಕೃತಿಗೆ ಸೇವೆಯನ್ನು ಕೊಟ್ಟಿದ್ದೀರಿ. ಚೆನ್ನಾಗಿ ಸ್ವಚ್ಛ ಮಾಡಲಿ ಎಂದು. ಅದಕ್ಕೆ ದೊಡ್ಡ ದೊಡ್ಡ ಪೊರಕೆಯನ್ನು ಕೊಟ್ಟಿದ್ದೀರಿ ಸ್ವಚ್ಛ ಮಾಡಿ ಎಂದು ಅಂದಾಗ ಗಾಬರಿಯೇಕೆ ಆಗುತ್ತೀರಿ? ನಿಮ್ಮ ಆದೇಶದಿಂದ ಅದು ಸ್ವಚ್ಛ ಮಾಡುತ್ತಿದೆ ಅಂದಾಗ ನೀವು ಏಕೆ ಏರುಪೇರಿನಲ್ಲಿ ಬರುತ್ತೀರಿ ನೀವೇ ಆದೇಶ ಕೊಟ್ಟಿದ್ದೀರಿ. ಅಚಲ, ಸ್ಥಿರವಾಗಿ ಮನಸ್ಸು, ಬುದ್ಧಿಯನ್ನು ಒಂದೇ ಬಾರಿ ಶಕ್ತಿಶಾಲಿಯನ್ನಾಗಿ ಮಾಡಿ. ಅಚಲ, ಸ್ಥಿರವಾದ ಸ್ಥಿತಿಯಲ್ಲಿ ಸ್ಥಿತರಾಗಿಬಿಡಿ. ಎಂದು ತಿಳಿಸುತ್ತಾ ಶಿವಪರಮಾತ್ಮ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿದ್ದು ಮನನ ಚಿಂತನೆ ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಸುಖ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಅಮರ ಭಾಗ್ಯವಂತನು ಎಂಬ ಸಮಾನದ ಸ್ಮೃತಿ ಸ್ವರೂಪ.

2. ನಾನು ಸದಾ ಮತ್ತು ಸಂಪೂರ್ಣವಾಗಿ ಅರಳಿರುವ ಆತ್ಮಿಕ ಗುಲಾಬಿ.

3. ನಾನು ಖುಷಿಯಲ್ಲಿ ಮನಸ್ಸಿನಿಂದ ನಾಟ್ಯ ಮಾಡುತ್ತಿದ್ದೇನೆ ಮತ್ತು ಹಾಡುತ್ತಿದ್ದೇನೆ.

4. ನಾನು ಸಹಜವಾಗಿ ಆನಂದದಲ್ಲಿರುವ ಬ್ರಾಹ್ಮಣನು.

5. ನಾನು ಸ್ಮೃತಿಯ ತಿಲಕವನ್ನು ಇಟ್ಟುಕೊಳ್ಳುವಾಗ ಮೊಟ್ಟ ಮೊದಲು ಸಂಪೂರ್ಣ ಪವಿತ್ರ ಭವ ಎಂಬ ವ್ರತವನ್ನು ಇಟ್ಟುಕೊಂಡಿದ್ದೇನೆ.

6. ನಾನು ಬ್ರಹ್ಮತಂದೆಯ ಸಮಾನವಾಗಿ ಪ್ರತಿ ಸಂಕಲ್ಪದಲ್ಲಿ, ಮಾತಿನಲ್ಲಿ ಮತ್ತು ಕರ್ಮದಲ್ಲಿ ಸಂಪೂರ್ಣ ಪವಿತ್ರತೆಯನ್ನು ಧಾರಣೆ ಮಾಡಿರುವ ಬ್ರಹ್ಮಚಾರಿ ಮತ್ತು ಬ್ರಹ್ಮಾಚಾರಿ.

7. ನಾನು ನನ್ನ ಸಂಕಲ್ಪದಲ್ಲಿ ಮಾತಿನಲ್ಲಿ ಮತ್ತು ಕರ್ಮದಲ್ಲಿ ಪವಿತ್ರತೆ ಎಷ್ಟರ ಶಾತವಿದೆ ಎಂದು ಮತ್ತು ಎಷ್ಟು ಪರಿವರ್ತನೆಯಾಗಿದ್ದೇನೆ ಎಂದು ಸ್ವಯಂ ಗೆ ಟೀಚರ್ ಆಗಿ ಪರಿಶೀಲನೆ ಮಾಡಿ ಅಂಕಗಳನ್ನು ಕೊಡುವ ತೀವ್ರ ಪುರುಷಾರ್ಥಿ.

8. ನಾನು ಪ್ರಕೃತಿಗೆ ಸ್ವಚ್ಛ ಮಾಡುವ ಸೇವೆಯನ್ನು ಕೊಟ್ಟು ಅಚಲ, ಮತ್ತು ಮಾಸ್ಟರ್ ಸರ್ವಶಕ್ತಿವಂತನ ಸ್ಥಿತಿಯಲ್ಲಿದ್ದು ಪ್ರಕೃತಿಯ ಆಟವನ್ನು ನೋಡುತ್ತಾ ಸ್ವರ್ಣಿಮ ಯುಗವನ್ನು ಆಹ್ವಾನ ಮಾಡಿದ್ದೇನೆ.

೯. ನಾನು ಸತ್ಯ ಮತ್ತು ಸ್ವಚ್ಛವಾದ ಹೃದಯದಿಂದ ಎಕಾನಮಿಯ (ಉಳಿತಾಯದ) ಅವತಾರ ವಾಗಲೇಬೇಕು ಎಂಬ ದೃಢಸಂಕಲ್ಪವನ್ನು ಪ್ರತ್ಯಕ್ಷ ಮಾಡಿ ತಂದೆಯನ್ನು ಪ್ರಸನ್ನ ಮಾಡಿದ್ದೇನೆ.

೧೦. ನಾನು ಒಂದು ಕ್ಷಣದಲ್ಲಿ ವಿದೇಹಿ, ಅಶರೀರಿ ಅಥವಾ ಆತ್ಮಭಿಮಾನಿ ಸ್ಥಿತಿಯಲ್ಲಿ ಸ್ಥಿತವಾಗಿ ಈ ಸೃಷ್ಟಿಯಲ್ಲಿ ಇರುವ ಏರುಪೇರಿನಿಂದ ಸುರಕ್ಷಿತವಾಗಿ ಇದ್ದೇನೆ.